ಶ್ರೀ ಪಿ. ವೆಂಕಟಗಿರಿಯಪ್ಪ.—ಬೇರೆ ಜಿಲ್ಲೆಗಳಿಗೆ ಈ ಯೋಜನೆಯಲ್ಲಿ ಎಷ್ಟೆಷ್ಟು ಹಣವನ್ನು ಕೊಟ್ಟಿದ್ದೀರಿ ?

ಶ್ರೀ ಕೆ. ಪುಟ್ಟಸ್ವಾಮಿ.—ಅದಕ್ಕೆ ನೋಟೀಸ್ ಬೇಕು.

Proposal to Reorganise the Taluks in South Kanara District.

*Q.—830. Sri S. D. SAMRAJYA (Brahmavar).—

Will the Government be pleased to state :—

(*a*) whether the Legislators of South Kanara had put before the Government in 1961 a proposal to reorganise the Taluks and form some new Taluks in South Kanara District ;

(*b*) if so, the decision they have taken in this behalf ?

*A.—Sri M. V. KRISHNAPPA (Minister for Revenue).—

(*a*) Yes.

(*b*) The question has been deferred for the present in view of the emergency.

ಶ್ರೀ ಎಸ್. ಡಿ. ಸಾಮ್ರಾಜ್ಯ.—ದಕ್ಷಿಣ ಕನ್ನಡ ಜಿಲ್ಲೆಯ ಶಾಸಕರು ಆ ಜಿಲ್ಲೆಯ ತಾಲ್ಲೂಕುಗಳನ್ನು ಜಾಸ್ತಿ ಮಾಡಬೇಕೆಂದು ಯಾವಾಗ ಸರ್ಕಾರದಲ್ಲಿ ಕೇಳಿಕೊಂಡರು ?

ಶ್ರೀ ಎಂ. ವಿ. ಕೃಷ್ಣಪ್ಪ.—1960 ನೇ ಇಸವಿಯಲ್ಲಿ ಈ ಮಾನ್ಯ ಸಭೆಯ ಕೆಲವು ಸದಸ್ಯರು ಹಿಂದಿನ ರೆವೆನ್ಯೂ ಮಂತ್ರಿಗಳನ್ನು ಕಂಡು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಾಲ್ಕು ತಾಲ್ಲೂಕುಗಳನ್ನು ಜಾಸ್ತಿ ಮಾಡಿಕೊಡಬೇಕೆಂದು ಮನವಿ ಪತ್ರವನ್ನು ಕೊಟ್ಟಿದ್ದಾರೆ. ಅದರ ಮೇರೆ ನಾವು ವಿವರಗಳನ್ನು ತರಿಸಿದೆವು. ಹೋದ ವರ್ಷ ನವೆಂಬರ್ ತಿಂಗಳಿನಲ್ಲಿ ಬಂತು. ಈ ಬಗ್ಗೆ ಅಂತಿಮ ತೀರ್ಮಾನವನ್ನು ತೆಗೆದುಕೊಳ್ಳುವುದನ್ನು ತುರ್ತು ಪರಿಸ್ಥಿತಿಯ ಕಾಲದಲ್ಲಿ ಮುಂದಕ್ಕೆ ಹಾಕಬೇಕೆಂದು ಸರ್ಕಾರ ತೀರ್ಮಾನ ಮಾಡಿದೆ.

ಶ್ರೀ ಎ. ಕೃಷ್ಣಶೆಟ್ಟಿ.—ತಾಲ್ಲೂಕುಗಳ ಪುನರ್ವಿಂಗಡಣೆಯಾಗಬೇಕೆಂದು ದಕ್ಷಿಣ ಕನ್ನಡ ಜಿಲ್ಲೆಯ ಶಾಸಕರು ಮನವಿ ಮಾಡಿದ್ದರೆ, ಆ ಜಿಲ್ಲೆಯನ್ನು ಎರಡು ಮಾಡಬೇಕೆಂಬ ಉದ್ದೇಶವೂ ಕೂಡ ಅವರಲ್ಲಿತ್ತು ಎಂದು ಸರ್ಕಾರಕ್ಕೆ ಗೊತ್ತಿದೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.— ಅನೇಕ ಜಿಲ್ಲೆಗಳು ಹೊಸದಾಗಿ ಆಗಬೇಕು, ತಾಲ್ಲೂಕುಗಳೂ ಆಗಬೇಕು ಎನ್ನುವ ಬೇಡಿಕೆಗಳಿವೆ. ದಕ್ಷಿಣ ಕನ್ನಡ ಜಿಲ್ಲೆಯನ್ನು ಎರಡು ಮಾಡಬೇಕೆಂದು ಕೆಲವು ಸದಸ್ಯರು ನನ್ನ ಹತ್ತಿರವೂ ಹೇಳಿಕೊಂಡಿದ್ದಾರೆ.

ಶ್ರೀ ಎಸ್. ಡಿ. ಸಾಮ್ರಾಜ್ಯ.—ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈಗಿರುವ ತಾಲ್ಲೂಕುಗಳು ದೊಡ್ಡದಾಗಿರುವುದರಿಂದ ಅವುಗಳನ್ನು ಸಣ್ಣ ತಾಲ್ಲೂಕುಗಳಾಗಿ ಮಾಡಬೇಕೆಂದು ಸರ್ಕಾರದ ಅಭಿಪ್ರಾಯ ಏದೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಅಲ್ಲ ಕೆಲವು ತಾಲ್ಲೂಕುಗಳು ಬಹಳ ದೊಡ್ಡವಾಗಿವೆ. ಬೇರೆ ಜಿಲ್ಲೆಗಳಿಗೆ ಹೋಲಿಸಿದರೆ ಅದು ದೊಡ್ಡ ಜಿಲ್ಲೆ ಮತ್ತು ತಾಲ್ಲೂಕುಗಳ ಸಂಖ್ಯೆ ಕಡಮೆ. ಆಡಳಿತ ಸೌಕರ್ಯದ ದೃಷ್ಟಿಯಿಂದ ಇನ್ನೂ ಎರಡು ಮೂರು ತಾಲ್ಲೂಕುಗಳು ಆದರೆ ಉತ್ತಮ. ಸೂಳ್ಯ ಒಂದು ತಾಲ್ಲೂಕು ಮಾಡಬೇಕೆಂದು ಎಲ್ಲವೂ ಸಿದ್ಧವಾಗಿತ್ತು. ಆದರೆ ತುರ್ತು ಪರಿಸ್ಥಿತಿಯಿಂದ ಅದನ್ನು ಮುಂದಕ್ಕೆ ಹಾಕಿದೆ.

ಶ್ರೀ ಬಿ. ಭಾಸ್ಕರ ಶೆಟ್ಟಿ.—ರಾಮಚಂದ್ರರಾಯರ ಕಮಿಟಿ ರಿಪೋರ್ಟಿನಲ್ಲಿ ಜಿಲ್ಲೆಗಳ ಮತ್ತು ತಾಲ್ಲೂಕುಗಳ ಸಂಖ್ಯೆಯನ್ನು ಕಡಮೆ ಮಾಡಬೇಕು ಎಂದು ಹೇಳಿದ್ದಾರೆ. ಇವುಗಳನ್ನು ಹೆಚ್ಚು ಮಾಡಬೇಕು ಎನ್ನುವ ವ್ಯವಸ್ಥೆ ಏನಾದರೂ ಸರ್ಕಾರದ ಮುಂದೆ ಇದೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಕೆಲವು ಕಡೆ ಕಡಮೆ ಮಾಡಬೇಕಾದ ಜಿಲ್ಲೆಗಳೂ ಇವೆ, ಕೆಲವು ಜಿಲ್ಲೆಗಳನ್ನು ಇಬ್ಭಾಗ ಮಾಡಬೇಕಾದ ಪರಿಸ್ಥಿತಿಯೂ ಇದೆ. ಕೆಲವು ಜಿಲ್ಲೆಗಳು ಬಹಳ ದೊಡ್ಡವು, ಕೆಲವು ಬಹಳ ಚಿಕ್ಕವು. ಆದುದರಿಂದ ಈ ಎಲ್ಲದೂ ದೃಷ್ಟಿಯಿಂದ ಈ ಪ್ರಶ್ನೆಯನ್ನು ಇತ್ಯರ್ಥ ಮಾಡಬೇಕಾದ ಪರಿಸ್ಥಿತಿ ಇದೆ. ಆದರೆ ತುರ್ತು ಪರಿಸ್ಥಿತಿಯಿಂದ ಯಾವುದನ್ನೂ ಮಾಡುವ ಹಾಗಿಲ್ಲ.

Sri GANJI VEERAPPA.—At least do Government admit that there is a necessity to reorganise all the Districts and Taluks in the State ?

ಶ್ರೀ ಎಂ. ವಿ. ಕೃಷ್ಣಪ್ಪ.—ಅದನ್ನು ನೂಕ್ಕ ಸಮಯ ಬಂದಾಗ ಮಾಡುವುದು ಉತ್ತಮ. ಸರ್ಕಾರ ಅನುಭವದಿಂದ ಆಡಳಿತ ದೃಷ್ಟಿಯಿಂದ ಕೆಲವು ಜಿಲ್ಲೆಗಳು ಬಹಳ ದೊಡ್ಡವಾಗಿರುವುದರಿಂದ ಅಡಿಷನಲ್ ಡೆಪ್ಯುಟಿ ಕಮಿಷನರು, ಸ್ಪೆಷಲ್ ಡೆಪ್ಯುಟಿ ಕಮಿಷನರು ಇವರುಗಳ ನೇಮಕವನ್ನು ಆಲೋಚನೆ ಮಾಡಬೇಕಾಗಿದೆ. ಕೆಲವು ಜಿಲ್ಲೆಗಳು ಬಹಳ ದೊಡ್ಡವಾಗಿ ಕೆಲಸ ವಿಪರೀತವಾಗಿ ಒಬ್ಬ ಜಿಲ್ಲಾಧಿಕಾರಿ ನಡೆಸಿಕೊಂಡು ಹೋಗುವುದು ಕಷ್ಟವಾಗುತ್ತದೆ. ಆ ದೃಷ್ಟಿಯಿಂದ ನೂಕ್ಕ ಸಮಯದಲ್ಲಿ ಪುನರ್ವಿಂಗಡಣೆ ಮಾಡಿ viable and administrative convenience ಗೆ ಅನುಕೂಲವಾಗಿರುವಂತೆ ಮಾಡಬೇಕೆನ್ನುವುದು ಸರ್ಕಾರದ ಗಮನದಲ್ಲಿದೆ.

Sri SANJEEVANATH AIKALA.—What is the sum and substance of the decision as far as South Kanara District is concerned—whether Government have decided to have more taluks or not ?

Sri M. V. KRISHNAPPA.—No decision has been taken. The Hon'ble Members of the House saw the Revenue Minister and they have pleaded for four more taluks at Sulya, Mulki in Mangalore, Baindur in Coondapur and Mudabidri. Government have thoroughly examined those cases, but no decision has been taken. Anyhow, there is a case to have some of the places as Taluk Headquarters.

ಶ್ರೀ ಎಸ್. ಡಿ. ಸಾಮ್ರಾಜ್ಯ.—ಈಗ ನೂಳ್ಯದ ವಿಚಾರ ರಿಪೋರ್ಟ್ ಬಂದಿದೆ ಎಂದು ಹೇಳಿದಿರಿ. ಅದನ್ನು ಪ್ರತ್ಯೇಕ ತಾಲ್ಲೂಕು ಮಾಡುವುದರಿಂದ ಅಲ್ಲಿರುವ ತೊಂದರೆಯನ್ನು ನಿವಾರಣೆ ಮಾಡಿದ ಹಾಗೆ ಆಗುವುದಿಲ್ಲ ಅಲ್ಲವೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಹೌದು. ಪ್ರತಿಯೊಬ್ಬರೂ ತಮ್ಮ ತಮ್ಮ ಊರುಗಳನ್ನು ಕೇಂದ್ರವಾಗಿಟ್ಟುಕೊಂಡು ಅದರ ಸುತ್ತಲಿರುವ ನಾಲ್ಕೈದು ಹೋಬಳಿಗಳನ್ನು ಸೇರಿಸಿ ಒಂದು ತಾಲ್ಲೂಕು ಮಾಡಬೇಕೆಂದು ಕೇಳುತ್ತಿದ್ದಾರೆ. ಈ ದೃಷ್ಟಿಯಿಂದಲೂ ಸ್ವಲ್ಪ ನಿಧಾನ ಮಾಡುವುದು ಮೇಲು.

ಶ್ರೀ ಎಸ್. ಗೋಪಾಲ ಸಾರೆನ್ನ.—ತುರ್ತು ಪರಿಸ್ಥಿತಿ ಎಂದು ಹೇಳುತ್ತಿದ್ದೀರಿ. ತಾಲ್ಲೂಕುಗಳನ್ನು ಪುನರ್ವಿಂಗಡನೆ ಮಾಡಿ ಸ್ವಲ್ಪ ಸವಲತ್ತನ್ನು ಜಾಸ್ತಿ ಮಾಡಿರುವುದರಿಂದ ತುರ್ತು ಪರಿಸ್ಥಿತಿಗೆ ಸಹಾಯಕವಾಗುವುದಿಲ್ಲವೇ ? ಅದರಿಂದ ಏನು ಬಾಧಕ ಬರುತ್ತದೆ ?

ಶ್ರೀ ಎಂ. ವಿ. ಕೃಷ್ಣಪ್ಪ.—ಅದರಿಂದ ಬಹಳ controversy ಬರುತ್ತದೆ. ಒಂದು ಕಡೆ ಪ್ರಾರಂಭ ಮಾಡಿದೆವು ಎಂದರೆ ಒಬ್ಬೊಬ್ಬರಾಗಿ ಕೇಳುವುದಕ್ಕೆ ಪ್ರಾರಂಭ ಮಾಡುತ್ತಾರೆ. ಅದರ ಜೊತೆಗೆ ತಾಲ್ಲೂಕು ಆಫೀಸುಗಳನ್ನು ಕಟ್ಟಬೇಕಾಗುತ್ತದೆ, ಅದಕ್ಕೆ ಬೇಕಾದ ಸಿಬ್ಬಂದಿಯನ್ನು ನೇಮಕ ಮಾಡಬೇಕಾಗುತ್ತದೆ. ಪ್ರತಿಯೊಂದಕ್ಕೂ ಖರ್ಚಾಗುತ್ತದೆ. ಇದರಿಂದ ಈಗಿನ ಪರಿಸ್ಥಿತಿಯಲ್ಲಿ ಸ್ವಲ್ಪ ನಿಧಾನವಾಗಿದೆ.

Sri GANJI VEERAPPA.—Can we take it that as soon as emergency condition is over, Government intends to take up this general question ?

Sri M. V. KRISHNAPPA.—I think so, Sir. It has to be decided once for all.

ಶ್ರೀ ಎ. ಕೃಷ್ಣ ಶೆಟ್ಟಿ.—ದಕ್ಷಿಣ ಕನ್ನಡ ಜಿಲ್ಲೆಯಲ್ಲ ಜನಸಾಂದ್ರತೆ ಹೆಚ್ಚಾಗಿ ಇರುವುದರಿಂದ, ಎರಡನೆಯದಾಗಿ ಕರಾವಳಿ ಪ್ರದೇಶದಲ್ಲ ಒಂದು ಚದರ ಮೈಲಿಗೆ ಒಂದುಸಾವಿರಕ್ಕಿಂತ ಜನಸಂಖ್ಯೆ ಹೆಚ್ಚಾಗಿರುವುದರಿಂದ ಅಲ್ಲ ಹೆಚ್ಚಿನ ತಾಲ್ಲೂಕುಗಳ ಆವಶ್ಯಕತೆ ಕಾಣುವುದಿಲ್ಲ ಅಲ್ಲವೇ ಸ್ವಾಮಿ ?

ಶ್ರೀ ಎಂ. ವಿ. ಕೃಷ್ಣಪ್ಪ.—ಬೇರೆ ಬೇರೆ ಅಭಿಪ್ರಾಯಗಳಿವೆ. ಒಟ್ಟಿನಲ್ಲಿ ಆಡಳಿತ ದೃಷ್ಟಿಯಿಂದ ಮತ್ತು ಇತರ ಕೆಲವು ಕಾರಣಗಳಿಂದ ಇನ್ನೂ ಒಂದೆರಡು ತಾಲ್ಲೂಕುಗಳು ಅಲ್ಲ ಆಗುವುದು ಉತ್ತಮ.

ಶ್ರೀ ಎಸ್. ಡಿ. ಸಾಮ್ರಾಜ್ಯ.—ಕೊಂಡಜ್ಜಿ ಬನಪ್ಪ ಸಮಿತಿಯ ರಿಪೋರ್ಟಿನಲ್ಲಿ ತಾಲ್ಲೂಕುಗಳು ಸಣ್ಣದಾಗಿದ್ದರೆ ಉತ್ತಮ, ಆ ರೀತಿ ಮಾಡಬೇಕೆಂದು ತಿಳಿಸಿದ್ದಾರೆ. ಎಷ್ಟು ದಿವಸದೊಳಗೆ ಈ ತಾಲ್ಲೂಕು ಮತ್ತು ಜಿಲ್ಲೆಗಳನ್ನು ಜಾಸ್ತಿ ಮಾಡಬಹುದು ಎಂದು ಹೇಳುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ತುರ್ತು ಪರಿಸ್ಥಿತಿ ಎಷ್ಟು ಬೇಗ ಮುಗಿದರೆ ಅಷ್ಟು ಬೇಗ ಮಾಡುತ್ತೇವೆ.

———